# ಪ್ರಾದೇಶಿಕ ಹಾಗೂ ಸಹಾಯಪ್ರದಾನ ಕೇಂದ್ರ
# ದಕ್ಷಿಣ ವಲಯ

## ರಾಷ್ಟ್ರೀಯ ಔಷಧಿ ಸಸ್ಯಗಳ ಮಂಡಳಿ
## ಆಯುಷ್ ಮಂತ್ರಾಲಯ, ಭಾರತ ಸರಕಾರ



*Berberis wightiana*



*Coscinium fenestratum*

## ಕೇರಳ ಅರಣ್ಯ ಸಂಶೋಧನಾ ಸಂಸ್ಥೆ

(ಕೇರಳ ರಾಜ್ಯ ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ ಪರಿಷತ್ತಿನ ಸಂಸ್ಥೆ)

ಪೀಚಿ ೬೮೦೬೫೩, ಕೇರಳ ರಾಜ್ಯ, ಭಾರತ



*Sida alnifolia*

ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ, ಒಟ್ಟು ಜನಸಂಖ್ಯೆಯ ಸುಮಾರು ೮೦ ರಷ್ಟು ಜನರು ತಮ್ಮ ಪ್ರಾಥಮಿಕ ಚಿಕಿತ್ಸೆಗಳಿಗೆ ವಿವಿಧ ಗಿಡಮೂಲಿಕೆಗಳನ್ನೇ ಅವಲಂಬಿಸಿರುವುದನ್ನು ಕಾಣಬಹುದು. ಜೊತೆಗೆ, ವಿವಿಧ ವೈದ್ಯಕೀಯ ಶಾಖೆಗಳಲ್ಲಿ ಬಳಸುವ ಸುಮಾರು ಶೇಕಡಾ ೨೫ ರಷ್ಟು ಔಷಧಿಗಳ ತಯಾರಿಕೆಗೆ ಸಸ್ಯ ಹಾಗೂ ಸಸ್ಯೋತ್ಪನ್ನಗಳನ್ನು ಬಳಸಲಾಗುತ್ತದೆ. ವರ್ಷದಿಂದ ವರ್ಷಕ್ಕೆ ಔಷಧೀಯ ಸಸ್ಯಗಳಿಗಿರುವ ಬೇಡಿಕೆ ಹೆಚ್ಚುತ್ತಿರುವ ಕಾರಣ ಅವುಗಳನ್ನು ಅಮಿತ ಪ್ರಮಾಣದಲ್ಲಿ ಮತ್ತು ಅಶಾಸ್ತ್ರೀಯವಾಗಿ ಶೇಖರಿಸಲಾಗುತ್ತಿದೆ. ತತ್ಪರಿಣಾಮವಾಗಿ, ಅನೇಕ ಔಷಧಿ ಸಸ್ಯಗಳ ಲಭ್ಯತೆ ಕಮ್ಮಿಯಾಗುತ್ತಿದ್ದು, ಔಷಧ ರಂಗದಲ್ಲಿ ಕಲಬೆರಿಕೆ ಮತ್ತು ಬದಲಿ ಔಷಧಿಗಳ ಬಳಕೆಯ ಸಮಸ್ಯೆಗಳು ವರ್ಧಿಸುತ್ತಿವೆ. ತಾಜಾ ಔಷಧಿ ಸಸ್ಯಗಳ ಕೊರತೆ ಮತ್ತು ಬಳಸುವ ಕಚ್ಚಾವಸ್ತುಗಳ ಹಾಗೂ ಔಷಧಿಗಳ ಗುಣಮಟ್ಟವನ್ನು ನಿಯಂತ್ರಿಸಲು ಬೇಕಾದ ಸಂಶೋಧನೆಗಳ ಕೊರತೆಯ ಪರಿಣಾಮದಿಂದಾಗಿ, ಭಾರತೀಯ ಔಷಧ ಚಿಕಿತ್ಸಾ ಪದ್ಧತಿಗಳು ಬಳಲುತ್ತಿವೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಭಾರತ ಸರಕಾರವು ೨೦೦೦ ಇಸವಿಯ ನವೆಂಬರ್‌ನಲ್ಲಿ ರಾಷ್ಟ್ರೀಯ ಔಷಧೀಯ ಸಸ್ಯಗಳ ಮಂಡಳಿ (National Medicinal Plants Board: NMPB) ಯನ್ನು ರೂಪಿಸಿತು. ಈ ಮಂಡಳಿಯು, ನಮ್ಮ ರಾಷ್ಟ್ರದಲ್ಲಿ ಔಷಧ ಸಸ್ಯಗಳ ಕುರಿತಾದ ಸಮಗ್ರ ವಿಚಾರಗಳನ್ನು ಪ್ರಚಾರ ಮಾಡುವ ಹಾಗೂ ಔಷಧ ಸಸ್ಯಗಳ ಕೃಷಿ, ಉತ್ಪಾದನೆ, ಮಾರಾಟ, ಬಳಕೆ ಹಾಗೂ ಸಂರಕ್ಷಣೆಯನ್ನು ಪ್ರೋತ್ಸಾಹಿಸುವ ಉನ್ನತ ಸಂಸ್ಥೆಯಾಗಿದೆ. ರಾಷ್ಟ್ರದ ವಿವಿಧ ಮಂತ್ರಾಲಯ/ಸಂಸ್ಥೆ/ವಿಭಾಗಗಳ ನಡುವೆ ನಿಕಟ ಸಂಬಂಧ ಹಾಗೂ ಸಹಕಾರವನ್ನು ಸೃಷ್ಟಿಸಿ, ಔಷಧೀಯ ಸಸ್ಯಗಳ ವಲಯದ ಸಮಗ್ರ ಅಭಿವೃದ್ಧಿಗಾಗಿ ಅವಶ್ಯಕವಾದ ವಿವಿಧ ನೀತಿಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸಿ ಅವುಗಳನ್ನು ಅನುಷ್ಠಾನಗೊಳಿಸುವುದು, ಈ ಮಂಡಳಿಯ ಪ್ರಮುಖ ಉದ್ದೇಶವಾಗಿದೆ.

ರಾಷ್ಟ್ರೀಯ ಔಷಧೀಯ ಸಸ್ಯಗಳ ಮಂಡಳಿಯು, ಔಷಧೀಯ ಸಸ್ಯಗಳ ಹೆಚ್ಚುತ್ತಿರುವ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು, ಆರ್ಥಿಕವಾಗಿ ಪ್ರಾಮುಖ್ಯತೆ ಪಡೆದಿರುವ ಅನೇಕ ಔಷಧಿ ಸಸ್ಯಗಳ ಕೃಷಿಯನ್ನು ವಿಸ್ತರಿಸಲು ಅನೇಕ ಯೋಜನೆಗಳನ್ನು ತಯಾರಿಸಿದೆ. ಜೊತೆಗೆ, ಅನೇಕ ಅಪೂರ್ವವಾದ ಔಷಧ ಸಸ್ಯಗಳನ್ನು ಕೃಷಿ ಮಾಡುವ ಹಾಗೂ ಅವುಗಳನ್ನು ಅವುಗಳ ಸ್ವಾಭಾವಿಕ ಪರಿಸರ (ಇನ್–ಸಿಟು) ಮತ್ತು ಹೊರ ಪರಿಸರ (ಎಕ್ಸ್–ಸಿಟು) ಗಳಲ್ಲಿ ಸಂರಕ್ಷಿಸುವ ದಿಶೆಯಲ್ಲೂ ಈ ಮಂಡಳಿಯು ವಿವಿಧ ಯೋಜನೆಗಳನ್ನು ಕಲ್ಪಿಸಿದೆ.



*Saraca asoca*

## ಎನ್‌ಎಂಪಿಬಿಯ ಪ್ರಾದೇಶಿಕ ಹಾಗೂ ಸಹಾಯಪ್ರದಾನ ಕೇಂದ್ರಗಳ ಸ್ಥಾಪನೆ



*Salacia agasthiamalana*

ಎನ್‌ಎಂಪಿಬಿಯು, ತನ್ನ ವಿವಿಧ ಕಾರ್ಯಕ್ರಮಗಳನ್ನು ಹಾಗೂ ಯೋಜನೆಗಳನ್ನು ದೇಶದಾದ್ಯಂತ ಫಲಪ್ರದವಾಗಿ ನಡೆಸಿಕೊಂಡು ಹೋಗಲು ಸಹಾಯಕವಾಗಲೆಂದು, ದೇಶದ ವಿವಿಧ ಭಾಗಗಳಲ್ಲಿ ಪ್ರಾದೇಶಿಕ ಕೇಂದ್ರಗಳನ್ನು (Regional cum Facilitation Centre: RCFC) ಸ್ಥಾಪಿಸಿದೆ. ಕೇರಳ ರಾಜ್ಯದ ಪೀಚಿ ಎಂಬಲ್ಲಿರುವ ಕೇರಳ ಅರಣ್ಯ ಸಂಶೋಧನಾ ಸಂಸ್ಥೆಯಲ್ಲಿ, ದಕ್ಷಿಣ ವಲಯದ ಪ್ರಾದೇಶಿಕ ಹಾಗೂ ಸಹಾಯಪ್ರದಾನ ಕೇಂದ್ರ (RCFC-Southern Region) ವನ್ನು ಸ್ಥಾಪಿಸಲಾಗಿದೆ.

## ಎನ್‌ಎಂಪಿಬಿ–ಪ್ರಾದೇಶಿಕ ಹಾಗೂ ಸಹಾಯಪ್ರದಾನ ಕೇಂದ್ರ (ದಕ್ಷಿಣ ವಲಯ)ದ ಧ್ಯೇಯ

ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳನ್ನು ಹಾಗೂ ಕೇಂದ್ರಾಡಳಿತ ಪ್ರದೇಶಗಳಾದ ಲಕ್ಷದ್ವೀಪ, ಪಾಂಡಿಚೇರಿ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳನ್ನು ಒಳಗೊಳ್ಳುವ ನಮ್ಮ ದೇಶದ ದಕ್ಷಿಣ ವಲಯದಲ್ಲಿ ಔಷಧೀಯ ಸಸ್ಯಗಳಿಗೆ ಸಂಬಂಧಪಟ್ಟ ವಿವಿಧ ಮೇಖಲೆಗಳಿಗೆ ಬೇಕಾದ ಮಾರ್ಗದರ್ಶನ ಹಾಗೂ ಸಹಾಯವನ್ನು ನೀಡುವುದು ಈ ಕೇಂದ್ರದ ಧ್ಯೇಯವಾಗಿದೆ.

## ಪ್ರಾದೇಶಿಕ ಹಾಗೂ ಸಹಾಯಪ್ರದಾನ ಕೇಂದ್ರ (ದಕ್ಷಿಣ ವಲಯ)ದ ಉದ್ದೇಶಗಳು

- ದಕ್ಷಿಣ ಭಾರತದಲ್ಲಿ, ಎನ್‌ಎಂಪಿಬಿಯು ಹಮ್ಮಿಕೊಳ್ಳುವ ವಿವಿಧ ಚಟುವಟಿಕೆಗಳನ್ನು ಸಂಘಟಿಸುವುದು.
- ದಕ್ಷಿಣ ಭಾರತದಲ್ಲಿ, ಔಷಧೀಯ ಸಸ್ಯಗಳ ವಲಯದಲ್ಲಿ ಪ್ರವರ್ತಿಸುತ್ತಿರುವ ವಿವಿಧ ಇಲಾಖೆಗಳ, ಸಂಘ–ಸಂಸ್ಥೆಗಳ ಚಟುವಟಿಕೆಗಳನ್ನು ಕ್ರೋಢೀಕರಿಸಿ, ಔಷಧೀಯ ಸಸ್ಯಗಳ ವಲಯಗಳಲ್ಲಿ ಸುಧಾರಣೆಯನ್ನು ಉಂಟುಮಾಡುವುದು.
- ಔಷಧೀಯ ಸಸ್ಯಗಳ ಗುಣಮಟ್ಟದ ಸಸಿ ಹಾಗೂ ಇತರೆ ನೆಡುವ ವಸ್ತುಗಳ (ಕ್ವಾಲಿಟಿ ಪ್ಲಾಂಟಿಂಗ್ ಮೆಟಿರಿಯಲ್ಸ್) ಉತ್ಪಾದನೆ, ಕೃಷಿ, ಸಂರಕ್ಷಣೆ, ಬೆಳೆ ಕೊಯ್ಲು, ಅಲ್ಪ–ಸಂಸ್ಕರಣೆ, ಮೌಲ್ಯವರ್ಧನೆ, ಸಂಗ್ರಹಣೆ, ವ್ಯಾಪಾರ ಹಾಗೂ ಗುಣಮಟ್ಟದ ನಿಯಂತ್ರಣ ಹೀಗೆ ವಿವಿಧ ನಿಟ್ಟಿನಲ್ಲಿ ಬೆಳೆಗಾರರ ಹಾಗೂ ವಹಿವಾಟುದಾರರ ತಾಂತ್ರಿಕ ಮತ್ತು ನಿರ್ವಹಣಕೌಶಲ್ಯವನ್ನು ವರ್ಧಿಸುವುದು.



*Dysoxylum malabaricum*

- ತರಬೇತಿ, ಕಾರ್ಯಾಗಾರ, ವಿಚಾರ ಗೋಷ್ಠಿ ಮತ್ತು ಸಮ್ಮೇಳನಗಳನ್ನು ನಡೆಸಲು ಅವಶ್ಯವಾದ ಆರ್ಥಿಕ ಹಾಗೂ ತಾಂತ್ರಿಕ ಸಹಾಯವನ್ನು ನೀಡುವುದು.
- ಅಳಿವಿನಂಚಿನಲ್ಲಿರುವ ಮತ್ತು ಹೆಚ್ಚಿನ–ಬೇಡಿಕೆಯಲ್ಲಿರುವ ಔಷಧೀಯ ಸಸ್ಯಗಳ ಸುಧಾರಿತ ಕೃಷಿ ಪದ್ಧತಿಗಳನ್ನು ಅಭಿವೃದ್ಧಿಪಡಿಸಲು ಅವಶ್ಯವಾದ ಸಹಾಯ–ಸಹಕಾರವನ್ನು ನೀಡುವುದು.
- ಆಯಾ–ಪ್ರದೇಶಗಳಿಗೆ ಸೂಕ್ತವಾದ ಔಷಧೀಯ ಸಸ್ಯಗಳ ಗುಣಮಟ್ಟದ ಸಸಿ ಹಾಗೂ ಇತರೆ ನೆಡುವ ವಸ್ತುಗಳ (ಕ್ವಾಲಿಟಿ ಪ್ಲಾಂಟಿಂಗ್ ಮೆಟಿರಿಯಲ್ಸ್) ಉತ್ಪಾದನೆಗೆ ಅನುಕೂಲ ಕಲ್ಪಿಸುವುದು.
- ಔಷಧೀಯ ಸಸ್ಯೋತ್ಪನ್ನಗಳ ಮಾರಾಟವನ್ನು ಬಲಪಡಿಸುವುದು ಹಾಗೂ ಪ್ರೋತ್ಸಾಹಿಸುವುದು.
- ಎನ್‌ಎಂಪಿಬಿಯು ಪ್ರಾಮುಖ್ಯತೆ ನೀಡಿರುವ ಸಂಶೋಧನೆ ಹಾಗೂ ಅಭಿವೃದ್ಧಿಕಾರ್ಯಕ್ರಮಗಳಿಗೆ ಪೂರಕವಾಗಬಲ್ಲ ಯೋಜನೆಗಳನ್ನು ರೂಪಿಸಲು ಹಾಗೂ ಅನುಷ್ಠಾನಕ್ಕೆ ತರಲು, ವಿವಿಧ ಸಂಘಟನೆಗಳಿಗೆ ಸಹಾಯವನ್ನು ನೀಡುವುದು.
- ಎನ್‌ಎಂಪಿಬಿಯು ಸಹಾಯದಿಂದ ಸಂಪೂರ್ಣಗೊಳಿಸಿರುವ ಎಲ್ಲ ಚಟುವಟಿಕೆಗಳ ಕುರಿತಾದ ಮಾಹಿತಿಗಳನ್ನು ಸಂಗ್ರಹಿಸಿ, ಯಶೋಗಾಥೆಗಳನ್ನು ಪಸರಿಸುವುದು.

ಕೇರಳ ಸರ್ಕಾರವು ೧೯೭೫ ರಲ್ಲಿ ಸ್ಥಾಪಿಸಿದ ಕೇರಳ ಅರಣ್ಯ ಸಂಶೋಧನಾ ಸಂಸ್ಥೆಯು (Kerala Forest Research Institute: KFRI) ಅರಣ್ಯ ಹಾಗು ಜೀವವೈವಿಧ್ಯ ಸಂರಕ್ಷಣೆಯ ವಿವಿಧ ಕ್ಷೇತ್ರಗಳಲ್ಲಿ ಸಂಶೋಧನೆಗಳನ್ನು ತೊಡಗಿಸಿಕೊಂಡು ಪ್ರಪಂಚದ ಉಷ್ಣವಲಯ ಪ್ರದೇಶದಲ್ಲಿರುವ ಅರಣ್ಯ ಸಂಶೋಧನಾ ಸಂಸ್ಥೆಗಳಲ್ಲಿ ಅಗ್ರಸ್ಥಾನವನ್ನು ಹೊಂದಿದೆ. ಈ ಸಂಸ್ಥೆಯು ಅರಣ್ಯ ಸಂಶೋಧನೆ ಹಾಗು ನೈಸರ್ಗಿಕ ಸಂಪನ್ಮೂಲಗಳ ಸುಸ್ಥಿರ ಬಳಕೆ ಮತ್ತು ನಿರ್ವಹಣೆಗೆ ಬೇಕಾದ ವೈಜ್ಞಾನಿಕ ಬೆಂಬಲವನ್ನು ನೀಡುತ್ತಾ ಬಂದಿದೆ. ಕೇರಳ ಅರಣ್ಯ ಸಂಶೋಧನಾ ಸಂಸ್ಥೆಯು ವಿವಿಧ ರಾಷ್ಟ್ರೀಯ ಹಾಗು ಅಂತರಾಷ್ಟ್ರೀಯ ಸಂಘಟನೆಗಳ ಕಾರ್ಯನಿರ್ವಹಣೆಗೆ ಬೇಕಾದ ಕೇಂದ್ರ ಸ್ಥಾನವಾಗಿ ಕಾರ್ಯಪ್ರವರ್ತನ ನಡೆಸುತ್ತಿದೆ. ಈ ಸಂಸ್ಥೆಯು ೨೦೦೨ನೇ ಇಸವಿಯಿಂದ ಕೇರಳ ರಾಜ್ಯ ವಿಜ್ಞಾನ, ತಂತ್ರಜ್ಞಾನ ಹಾಗೂ ಪರಿಸರ ಪರಿಷತ್ತಿನ (Kerala State Council for Science, Technology and Environment: KSCSTE) ಭಾಗವಾಗಿದೆ.



## ಸಂಪರ್ಕಿಸಿ (CONTACT)


**ಯೋಜನೆಯ ಪ್ರಾದೇಶಿಕ ನಿರ್ದೇಶಕರು**
ಎನ್‌ಎಂಪಿಬಿ–ಪ್ರಾದೇಶಿಕ ಹಾಗೂ ಸಹಾಯಪ್ರದಾನ ಕೇಂದ್ರ (ದಕ್ಷಿಣ ವಲಯ)
ಕೇರಳ ಅರಣ್ಯ ಸಂಶೋಧನಾ ಸಂಸ್ಥೆ
ಪೀಚಿ–680653, ತ್ರಿಶೂರ್ ಜಿಲ್ಲೆ
ಕೇರಳ, ಭಾರತ
ದೂರವಾಣಿ: +91 487 2690100
+91 9447618335
ಮಿಂಚಂಚೆ: rcfcsouthern@gmail.com
ಜಾಲತಾಣ: www.rcfcsouthern.org

**The Project Regional Director**
NMPB Regional-cum-Facilitation Centre (Southern Region)
Kerala Forest Research Institute
Peechi 680653, Thrissur Distict
Kerala, India
Phone: +91 487 2690100
+91 9447618335
E-mail: rcfcsouthern@gmail.com
website: www.rcfcsouthern.org

ಡಾ. ಯು.ಎಂ. ಚಂದ್ರಶೇಖರ
ದೂರವಾಣಿ: +91 493 1220218
+91 9446330407
ಮಿಂಚಂಚೆ: umchandra@rediffmail.com

ಡಾ. ಪಿ. ಸುಜನಪಾಲ್
ದೂರವಾಣಿ: +91 487 2690218
+91 9447851737
ಮಿಂಚಂಚೆ: sujanapalp@gmail.com



**Kerala Forest Research Institute**
(An Institution of Kerala State Council for Science, Technology & Environment)
Peechi 680 653, Thrissur, Kerala
Phone: +91-487-2690100
Fax: +91-487-2690111
Website: www.kfri.res.in

**National Medicinal Plants Board**
Ministry of AYUSH, Govt. of India
Indian Red Cross Society (IRCS)
Annexe Building, 1st & 2nd floor
1 Red Cross Road, New Delhi 110001
Phone: +91 11-23721840
Website: www.nmpb.nic.in